1 ನೇ ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಪ್ರ.ದ.ನ್ಯಾ.ದಂ.ರವರ ನ್ಯಾಯಾಲಯ, ನಂಜನಗೂಡು

ಸಿ.ಸಿ.ಸಂಖ್ಯೆ3339/2025

ಪಿರ್ಯಾದಿ : ಬಿಳಿಗೆರೆ ಪೊಲೀಸರು

ವಿರುದ್ಧ

ಆರೋಪಿ :
1 ಫಯಾಜ್ ಅಹಮದ್ ಬಿನ್ ಲೇಟ್ ನಜೀರ್ ಅಹಮದ್ 49 ವರ್ಷ
2 ಇಲಿಯಾಜ್ ಅಹಮದ್ ಉ.ಫಜು ಉ.ಫಜಿಲ್ ಅಹಮದ್ ಬಿನ್ ಫಯಾಜ್ ಅಹಮದ್ 26 ವರ್ಷ
3 ಅಜ್ಮಲ್ ಅಹಮದ್ ಬಿನ್ ಫಯಾಜ್ ಅಹಮದ್ 21 ವರ್ಷ
4 ಫಸ್ಸಿ ಅಹಮದ್ ಬಿನ್ ಮಂಜುರ್ ಅಹಮದ್ 25 ವರ್ಷ

ಆರೋಪಿತರ ವಾಸಃ ನಗರ್ಲೆ ಗ್ರಾಮ, ನಂಜನಗೂಡು ತಾಲ್ಲೂಕು

## ದೋಷಾರೋಪಣೆ

ಶ್ರೀಮತಿ.ಸರಿತ ಕುಮಾರಿ.ಎ.ಎಂ, ಬಿ.ಎ.,ಎಲ್.ಎಲ್.ಬಿ., 1ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ನಂಜನಗೂಡು ಆದ ನಾನು ಆರೋಪಿತರಾದ ನಿಮ್ಮ ಮೇಲೆ ದೋಷಾರೋಪಿಸುವುದೇನೆಂದರೆ:-

ದಿನಾಂಕ:22/03/2025 ರಂದು 17:00 ಗಂಟೆ ಸಮಯದಲ್ಲಿ ನಂಜನಗೂಡು ತಾಲೂಕು, ಬಿಳಿಗೆರೆ ಪೊಲೀಸ್ ಠಾಣಾ ವ್ಯಾಪ್ತಿಗೆ ಸೇರಿದ ನಗರ್ಲೆ ಗ್ರಾಮದಲ್ಲಿ ವಾಸವಾಗಿರುವ ಚಾಸಾ.1 ರವರ ಮನೆಯ ಮುಂಭಾಗ ಹಣ್ಣಿನ ಅಂಗಡಿಯಲ್ಲಿ ಚಾಸಾ.2 ಮತ್ತು 3 ರವರು ಹಣ್ಣಿನ ವ್ಯಾಪಾರ ಮಾಡುತ್ತಿದ್ದಾಗ, ಅಲ್ಲಿಗೆ ಬಂದ 1 ನೇ ಆರೋಪಿತರಾದ ನೀವು ಕಲ್ಲಂಗಡಿ ಹಣ್ಣನ್ನು ಖರೀದಿಸಿ ಮನೆಗೆ ತೆಗೆದುಕೊಂಡು ಹೋಗಿದ್ದ ಹಣ್ಣನ್ನು ವಾಪಸ್ಸು ತಂದು ಚಾಸಾ.3 ರವರಿಗೆ ನೀನು ಕೊಟ್ಟಿರುವ ಕಲ್ಲಂಗಡಿ ಹಣ್ಣು ಚೆನ್ನಾಗಿಲ್ಲ ಯಾವ ಸೀಮೆಯ ಹಣ್ಣನ್ನು ಇಟ್ಟುಕೊಂಡು ವ್ಯಾಪಾರ ಮಾಡುತ್ತೀಯಾ ಎಂದು ಅವಾಚ್ಯ ಶಬ್ದಗಳಿಂದ ಬೈದು ಹೋಗಿದ್ದು, ಮತ್ತೆ ಅದೇ ಉದ್ದೇಶದಿಂದ 18:45 ಗಂಟೆ ಸಮಯದಲ್ಲಿ ಆರೋಪಿತರಾದ ನೀವು ಅಪರಾಧವನ್ನು ಎಸಗುವ ಸಮಾನ ಉದ್ದೇಶದಿಂದ ಚಾಸಾ. 1 ರವರ ಹಣ್ಣಿನ ಅಂಗಡಿಯ ಬಳಿ ಬಂದು ಚಾಸಾ.2 ಮತ್ತು 3 ರವರನ್ನು ತೇರಿ ಮಾಕೋ, ಚಿನಾಲಿ

ಎಂದು ಉರ್ದು ಭಾಷೆಯಲ್ಲಿ ಅವಾಚ್ಯ ಶಬ್ದಗಳಿಂದ ಬೈದು ಉದ್ರೇಕವನ್ನುಂಟು ಮಾಡಿದರೆ ಅಂತಹ ಉದ್ರೇಕದಿಂದ ಶಾಂತಿ ಭಂಗ ಮಾಡಲಿ ಅಥವಾ ಇತರೆ ಯಾವುದೇ ಅಪರಾಧ ಮಾಡಲಿ ಎನ್ನುವ ಉದ್ದೇಶದಿಂದ ಅವರನ್ನು ಅವಮಾನಿಸಿರುತ್ತೀರಿ. ಆದ್ದರಿಂದ ಆರೋಪಿತರಾದ ಭಾರತೀಯ ನ್ಯಾಯ ಸಂಹಿತೆಯ ಕಲಂ.352 ಸಹವಾಚಕ ಕಲಂ.3(5) ರಡಿ ಶಿಕ್ಷಾರ್ಹವಾದ ಅಪರಾಧವೆಸಗಿರುವಿರೆಂದು ನಿಮ್ಮ ಮೇಲೆ ದೋಷಾರೋಪಿಸಲಾಗಿದೆ.

ಎರಡನೆಯದಾಗಿ , ಅದೇ ದಿನ, ಅದೇ ವೇಳೆ ಮತ್ತು ಅದೇ ಸ್ಥಳದಲ್ಲಿ, ಆರೋಪಿತರಾದ ನೀವು ಅಪರಾಧವನ್ನು ಎಸಗುವ ಸಮಾನ ಉದ್ದೇಶವನ್ನು ಹೊಂದಿ, 1 ನೇ ಆರೋಪಿತರಾದ ನೀವು ಚಾಸಾ. 3 ರವರ ಕೊರಳ ಪಟ್ಟಿ ಹಿಡಿದುಕೊಂಡಾಗ 2 ನೇ ಆರೋಪಿತರಾದ ನೀವು ಕೈ ಯಿಂದ ತಲೆಗೆ ಮತ್ತು ಎಡಕೈಗೆ ಹೊಡೆದಿರುತ್ತೀರಿ, 3 ನೇ ಆರೋಪಿತರಾದ ನೀವು ಕೈ ಯಿಂದ ಬೆನ್ನಿಗೆ ಹೊಡೆದಿರುತ್ತೀರಿ, ಜಗಳ ಬಿಡಿಸಲು ಬಂದ ಚಾಸಾ.2 ರವರಿಗೆ 2 ನೇ ಆರೋಪಿತರಾದ ನೀವು ಕೈ ಯಿಂದ ಮುಖಕ್ಕೆ ಮತ್ತು ಬಲಭಾಗದ ಕತ್ತಿಗೆ ಹೊಡೆದಿದ್ದು , 4 ನೇ ಆರೋಪಿತರಾದ ನೀವು ಕೈಯಿಂದ ಮುಷ್ಟಿ ಕಟ್ಟಿ ತಲೆಗೆ ಪಂಚ್ ಮಾಡಿ ಹೊಡೆದಿರುತ್ತೀರಿ , ಬಿಡಿಸಲು ಹೋದ ಚಾಸಾ.1 ರವರನ್ನು 1 ನೇ ಆರೋಪಿತರಾದ ನೀವು ಕೈ ಹಿಡಿದು ಎಳೆದು ಹಿಂದಕ್ಕೆ ತಳ್ಳಿ ಕೈ ಯಿಂದ ಎದೆಗೆ ಮತ್ತು ಬೆನ್ನಿಗೆ ಗುದ್ದಿ ಸಾಮಾನ್ಯ ಸ್ವರೂಪದ ನೋವುಂಟು ಮಾಡಿರುತ್ತೀರಿ. ಆದ್ದರಿಂದ ಆರೋಪಿತರಾದ ಭಾರತೀಯ ನ್ಯಾಯ ಸಂಹಿತೆಯ ಕಲಂ.115(2) ಸಹವಾಚಕ ಕಲಂ.3(5)ರಡಿ ಶಿಕ್ಷಾರ್ಹವಾದ ಅಪರಾಧವೆಸಗಿರುವಿರೆಂದು ನಿಮ್ಮ ಮೇಲೆ ದೋಷಾರೋಪಿಸಲಾಗಿದೆ.

ಮೂರನೆಯದಾಗಿ , ಅದೇ ದಿನ, ಅದೇ ವೇಳೆ ಮತ್ತು ಅದೇ ಸ್ಥಳದಲ್ಲಿ, ಆರೋಪಿತರಾದ ನೀವು ಅಪರಾಧವನ್ನು ಎಸಗುವ ಸಮಾನ ಉದ್ದೇಶವನ್ನು ಹೊಂದಿ, 4 ನೇ ಆರೋಪಿತರಾದ ನೀವು ಚಾಕುವಿನಿಂದ ಚಾಸಾ.3 ರವರ ಹಣೆಯ ಎಡಭಾಗಕ್ಕೆ ಚುಚ್ಚಿ ಸಾಮಾನ್ಯ ಸ್ವರೂಪದ ನೋವುಂಟು

ಮಾಡಿರುತ್ತೀರಿ. ಆದ್ದರಿಂದ ಆರೋಪಿತರಾದ ಭಾರತೀಯ ನ್ಯಾಯ ಸಂಹಿತೆಯ ಕಲಂ.118(1) ಸಹವಾಚಕ ಕಲಂ.3(5)ರಡಿ ಶಿಕ್ಷಾರ್ಹವಾದ ಅಪರಾಧವೆಸಗಿರುವಿರೆಂದು ನಿಮ್ಮ ಮೇಲೆ ದೋಷಾರೋಪಿಸಲಾಗಿದೆ.

ನಾಲ್ಕನೆಯದಾಗಿ , ಅದೇ ದಿನ, ಅದೇ ವೇಳೆ ಮತ್ತು ಅದೇ ಸ್ಥಳದಲ್ಲಿ, ಆರೋಪಿತರಾದ ನೀವು ಅಪರಾಧವನ್ನು ಎಸಗುವ ಸಮಾನ ಉದ್ದೇಶವನ್ನು ಹೊಂದಿ, 1 ರಿಂದ 4 ನೇ ಆರೋಪಿತರಾದ ನೀವು ಚಾಸಾ.1 ರಿಂದ 3 ರವರಿಗೆ ಮುಂದೊಂದು ದಿನ ನಿಮ್ಮನ್ನು ಕೊಲೆ ಮಾಡದೇ ಬಿಡುವುದಿಲ್ಲವೆಂದು ಕೊಲೆ ಬೆದರಿಕೆ ಹಾಕಿ ಅಪರಾಧಿಕ ಭಯೋತ್ಪಾದನ್ನೆಂಟು ಮಾಡಿರುತ್ತೀರಿ. ಆದ್ದರಿಂದ ಆರೋಪಿತರಾದ ಭಾರತೀಯ ನ್ಯಾಯ ಸಂಹಿತೆಯ ಕಲಂ.351(2) ಸಹವಾಚಕ ಕಲಂ.3(5)ರಡಿ ಶಿಕ್ಷಾರ್ಹವಾದ ಅಪರಾಧವೆಸಗಿರುವಿರೆಂದು ನಿಮ್ಮ ಮೇಲೆ ದೋಷಾರೋಪಿಸಲಾಗಿದೆ.

ಕೊನೆಯದಾಗಿ , ಅದೇ ದಿನ, ಅದೇ ವೇಳೆ ಮತ್ತು ಅದೇ ಸ್ಥಳದಲ್ಲಿ, ಆರೋಪಿತರಾದ ನೀವು ಅಪರಾಧವನ್ನು ಎಸಗುವ ಸಮಾನ ಉದ್ದೇಶವನ್ನು ಹೊಂದಿ, 4 ನೇ ಆರೋಪಿತರಾದ ನೀವು ಮಹಿಳೆಯಾದ ಚಾಸಾ.1 ರವರ ಮೇಲೆ ಹಲ್ಲೆ ಮಾಡಿ ಆಕೆಯ ಮೇಲೆ ಅಪರಾಧಿಕ ಬಲಪ್ರಯೋಗ ಮಾಡಿರುತ್ತೀರಿ. ಆದ್ದರಿಂದ ಆರೋಪಿತರಾದ ಭಾರತೀಯ ನ್ಯಾಯ ಸಂಹಿತೆಯ ಕಲಂ.74 ಸಹವಾಚಕ ಕಲಂ.3(5)ರಡಿ ಶಿಕ್ಷಾರ್ಹವಾದ ಅಪರಾಧವೆಸಗಿರುವಿರೆಂದು ನಿಮ್ಮ ಮೇಲೆ ದೋಷಾರೋಪಿಸಲಾಗಿದೆ.

(ಮೇಲ್ಕಂಡ ಆರೋಪವನ್ನು ಆರೋಪಿತರಿಗೆ ಓದಿ ಹೇಳಿ ಕೇಳಲಾಯಿತು. ಆರೋಪಿ ಕೊಟ್ಟ ಉತ್ತರವನ್ನು ಅವರು ಉತ್ತರಿಸಿದಂತೆಯೇ ಬರೆದುಕೊಂಡಿದ್ದು ಸಂಪೂರ್ಣ ಹಾಗೂ ಸರಿಯಾದ ಮಾಹಿತಿಯನ್ನು ಒಳಗೊಂಡಿದೆ ಎಂದು ದಿನಾಂಕ 18.03.2026 ರಂದು ತೆರೆದ ನ್ಯಾಯಾಲಯದಲ್ಲಿ ದೃಢೀಕರಿಸಿರುತ್ತೇನೆ.)

1 ನೇ ಹೆ ಸಿ.ಜೆ. ಮತ್ತು ಜೆ.ಎಂ.ಎಫ್.ಸಿ.
ನಂಜನಗೂಡು

1 ನೇ ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಪ್ರ.ದ.ನ್ಯಾ.ದಂ.ರವರ ನ್ಯಾಯಾಲಯ, ನಂಜನಗೂಡು

ಸಿ.ಸಿ.ಸಂಖ್ಯೆ3339/2025

ಪಿರ್ಯಾದಿ : ಬಿಳಿಗೆರೆ ಪೊಲೀಸರು

ವಿರುದ್ಧ

ಆರೋಪಿ :
1 ಫಯಾಜ್ ಅಹಮದ್ ಬಿನ್ ಲೇಟ್ ನಜೀರ್ ಅಹಮದ್ 49 ವರ್ಷ
2 ಇಲಿಯಾಜ್ ಅಹಮದ್ ಉ.ಫಜು ಉ.ಫಜಿಲ್ ಅಹಮದ್ ಬಿನ್ ಫಯಾಜ್ ಅಹಮದ್ 26 ವರ್ಷ
3 ಅಜ್ಮಲ್ ಅಹಮದ್ ಬಿನ್ ಫಯಾಜ್ ಅಹಮದ್ 21 ವರ್ಷ
4 ಫಸ್ಸಿ ಅಹಮದ್ ಬಿನ್ ಮಂಜುರ್ ಅಹಮದ್ 25 ವರ್ಷ

ಆರೋಪಿತರ ವಾಸಃ ನಗರ್ಲೆ ಗ್ರಾಮ, ನಂಜನಗೂಡು ತಾಲ್ಲೂಕು

: ಆಪಾದನೆ :

ಪ್ರಶ್ನೆ:1- ಈ ಮೇಲೆ ಹೇಳಿದಂತೆ ನಿಮಗೆ ಓದಿ ಹೇಳಿ ವಿವರಿಸಿದ ಆಪಾದನೆಯನ್ನು ಅರ್ಥಮಾಡಿಕೊಂಡಿರುವಿರಾ?

1 ನೇ ಆರೋಪಿ ಉತ್ತರಃ

2 ನೇ ಆರೋಪಿ ಉತ್ತರಃ

3 ನೇ ಆರೋಪಿ ಉತ್ತರಃ

4 ನೇ ಆರೋಪಿ ಉತ್ತರಃ

ಪ್ರಶ್ನೆ:2- ಸದರಿ ಆಪಾದನೆಗಳನ್ನು ಒಪ್ಪಿಕೊಳ್ಳುವಿರಾ ಅಥವಾ ವಿಚಾರಣೆಯಾಗಬೇಕೋ?

1 ನೇ ಆರೋಪಿ ಉತ್ತರಃ

2 ನೇ ಆರೋಪಿ ಉತ್ತರಃ

3 ನೇ ಆರೋಪಿ ಉತ್ತರಃ

4 ನೇ ಆರೋಪಿ ಉತ್ತರಃ

ಎಲ್ಲಾ ಆಪಾದನೆಗಳನ್ನು ನನ್ನ ಸಮಕ್ಷಮ ಓದಿ ಹೇಳಿ ಆರೋಪಿತನ ಹೇಳಿಕೆಯನ್ನು ಪಡೆದುಕೊಂಡು ಸತ್ಯವಾಗಿದೆ ಎಂದು ದೃಢೀಕರಿಸಲಾಗಿದೆ.

1 ನೇ ಹೆ ಸಿ.ಜೆ. ಮತ್ತು ಜೆ.ಎಂ.ಎಫ್.ಸಿ.

**ನಂಜನಗೂಡು**